ದಿನಾಂಕಃ 26.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಸ್.ಸಿ.ಎನ್., ವಕೀಲರಿಂದ ಆರೋಪಿ ಪರವಾಗಿ-

20. ನಾನು ಓದಿದವಳಲ್ಲ. ನಮ್ಮ ಕುಟುಂಬ ಈಗ ಸಗನಿ ಬಸವನಹಳ್ಳಿ ಬೋವಿ ಕಾಲೋನಿಯಲ್ಲಿ ವಾಸವಿದ್ದೇನೆ. ಸದರಿ ಬೋವಿ ಕಾಲೋನಿ ಕಡೂರಿನ ಎಮ್ಮೆದೊಡ್ಡಿ ಅಂಚೆ, ಮದಗದ ಕೆರೆ ಮೇಲೆ ಇದೆ. ಸಗನಿ ಬಸವನಹಳ್ಳಿ ಒಂದು ಗುಡ್ಡಗಾಡು ಪ್ರದೇಶ. ನಮ್ಮೂರಿನಲ್ಲಿ ಸುಮಾರು ಇಪ್ಪತ್ತು ಮನೆಗಳಿವೆ. ನಾವೆಲ್ಲರೂ ಒಂದೇ ಜನಾಂಗದವರು ಅಲ್ಲಿ ವಾಸವಿದ್ದೇವೆ. ನಮ್ಮ ಊರಿನಲ್ಲಿ ಒಂದು ಮನೆಗೆ ಇನ್ನೊಂದು ಮನೆ ಹತ್ತಿರದಲ್ಲಿದೆ. ನಮ್ಮ ಊರು ಅರೆ ಮಲೆನಾಡು ಆಗಿದ್ದು ಮಳೆಗಾಲದಲ್ಲಿ ಹೆಚ್ಚು ಮಳೆ ಬರುತ್ತದೆ. ನಮ್ಮ ಊರಿನಲ್ಲಿ ಮಳೆಗಾಲದಲ್ಲಿ ವಾರ ಗಟ್ಟಲೆ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಳೆಗಾಲದಲ್ಲಿ ಕೆಲವೊಮ್ಮ 2-3 ದಿನ ವಿದ್ಯುತ್ ಸಂಪರ್ಕ ಇರುವುದಿಲ್ಲ ಎನ್ನುತ್ತಾರೆ.

21. ನಮ್ಮ ಊರಿಗೆ ಕಡೂರಿನಿಂದ ಮತ್ತು ಸಖರಾಯ ಪಟ್ಟಣದಿಂದ ತಲುಪಬಹುದು. ಕಡೂರಿನಿಂದ ನಮ್ಮ ಊರು 40 ಕಿಮೀ ದೂರ ಇದೆ. ನಮ್ಮ ಊರಿನ ರಸ್ತೆಯಲ್ಲಿ ಸ್ವಲ್ಪ ದೂರ ಚೆನ್ನಾಗಿಲ್ಲ ಉಳಿದಂತೆ ರಸ್ತೆ ಚೆನ್ನಾಗಿದೆ. ನಮ್ಮ ಊರಿಗೆ ಬಸ್ಸಿನ ಸಂಪರ್ಕ ಇಲ್ಲ. ಜನರು ಆಟೋದಲ್ಲಿ ಓಡಾಡುತ್ತಾರೆ. ಆಟೋ ಅಥವ ಕಾರಿನಲ್ಲಿ ನಮ್ಮೂರು ತಲುಪಲು ಒಂದು ಗಂಟೆ ಸಮಯ ಬೇಕು.

22. ಸಖರಾಯಪಟ್ಟಣ ನಮ್ಮೂರಿನಿಂದ 8 ಕಿಮೀ ದೂರದಲ್ಲಿದೆ. ಸಖರಾಯಪಟ್ಟಣ ರಸ್ತೆ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಸಖರಾಯ ಪಟ್ಟಣ ದಿಂದ ನಮ್ಮೂರಿಗೆ ಬಸ್ಸು ಇಲ್ಲ. ಸಖರಾಯಪಟ್ಟಣ ಕ್ಕೆ ನಮ್ಮೂರಿನಿಂದ ಆಟೋ ಅಥವ ಕಾರಿನಲ್ಲಿ ಅರ್ದಗಂಟೆ ಪ್ರಯಾಣ ಆಗುತ್ತದೆ. ಕಡೂರಿನಿಂದ ಸಖರಾಯಪಟ್ಟಣಕ್ಕೆ 30 ಕಿಮೀ ದೂರ ಇದೆ.

ಕಡೂರಿನಿಂದ ಸಖರಾಯಪಟ್ಟಣಕ್ಕೆ ಬಸ್ಸಿನಲ್ಲಿ 45 ನಿಮಿಷದಲ್ಲಿ ತಲುಪಬಹುದು.

23. 1 ನೇ ಆರೋಪಿ ಕಾಂತ ಮತ್ತು 2 ನೇ ಆರೋಪಿ ಮಂಜುನಾಥ ಇಬ್ಬರು ಗಂಡ ಹೆಂಡತಿ. 2 ನೇ ಆರೋಪಿ, ಚಾಸಾ.14 ತಿಮ್ಮಾಭೋವಿ ಮತ್ತು ನಾಗರಾಜ ಅಣ್ಣತಮ್ಮಂದಿರು. 1 ನೇ ಆರೋಪಿ, ಚಾಸಾ.13 ಶೈಲ ಮತ್ತು ಚಾಸಾ.16 ರತ್ನಮ್ಮ ಅಕ್ಕತಂಗಿಯರು. 1 ನೇ ಆರೋಪಿಯ ಸಹೋದರಿ ಚಾಸಾ.13 ಶೈಲ, ನಾಗರಾಜ್ ಎನ್ನುವವರನ್ನು ಮದುವೆಯಾಗಿದ್ದಾಳೆ. ಚಾಸಾ.17 ಕಾವ್ಯ ಚಾಸಾ.16 ರತ್ನಮ್ಮಳ ಮಗಳು. ಚಾಸಾ.18 ಗೋವಿಂದರಾಜು 1 ನೇ ಆರೋಪಿ, ಚಾಸಾ.13 ಹಾಗೂ 16 ರ ಸಹೋದರು. ಚಾಸಾ.19 ರವರು, 1 ನೇ ಆರೋಪಿ, ಚಾಸಾ.13, ಚಾಸಾ.16 ಹಾಗೂಾ ಚಾಸಾ.18 ರವರ ತಾಯಿ.

24. ಆರೋಪಿತರು ಹಾಗೂಾ ಚಾಸಾ.13 ಮತ್ತು 14 ರವರು ನಮ್ಮ ಊರಿನ ನಿವಾಸಿಗಳು. 1 ನೇ ಆರೋಪಿಯ ತಾಯಿ, ಅಣ್ಣ ಹಾಗೂ ಅಕ್ಕ ರತ್ನಮ್ಮ ಅರಸೀಕೆರೆ ನಿವಾಸಿಗಳು. ಆರೋಪಿತರಿಗೆ ಒಂದು ಗಂಡು ಹಾಗೂ ಹೆಣ್ಣುಮಗು ಇದೆ. 2 ನೇ ಆರೋಪಿ ನನ್ನ ತಮ್ಮ ಎಂದು ನಾನು ಪೋಲೀಸರಲ್ಲಿ ನೀಡಿದ ಹೇಳಿಕೆಯಲ್ಲಾಗಲಿ ಅಥವ ದೂರಿನಲ್ಲಾಗಲಿ ಹೇಳಿಲ್ಲ.

25. ದಿಃ 21.12.2022 ರಂದು ಸಖರಾಯಪಟ್ಟಣ ಠಾಣೆಯಲ್ಲಿ ನನ್ನ ಮಗಳು ಭಾರತಿ ಕಾಣೆಯಾಗಿದ್ದಾಳೆಂದು ದೂರು ನೀಡಿದ್ದೇನೆ. ಸದರಿ ದೂರು ಸಲ್ಲಿಸಲು ನಾನು ಮಾಹಿತಿ ನೀಡಿದ್ದೇನೆ. ಸದರಿ ದೂರಿನಲ್ಲಿ ನನ್ನ ಮಗಳು ಭಾರತಿಗೆ 19 ವರ್ಷ ಪ್ರಾಯ ಎಂದು ಹೇಳಿದ್ದೇನೆ. ನಾನು ದೂರು ಸಲ್ಲಿಸುವ ದಿನಾಂಕಕ್ಕೆ ನನ್ನ ಮಗಳು ಭಾರತಿಗೆ 19 ವರ್ಷ ಪ್ರಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.1 ದೂರಿಗೆ ಸಂಬಂಧಿಸಿದಂತೆ ನಾನು, ನನ್ನ ಮಗಳು ಭಾರತಿ

ಪೋಲೀಸರಲ್ಲಿ ಹೇಳಿಕೆ ನೀಡಿದ್ದೇವೆ. ನನ್ನ ಮಗಳು ಭಾರತಿ ಪೋಲೀಸರಲ್ಲಿ ದಿಃ 02.01.2023 ರಂದು ಹೇಳಿಕೆ ನೀಡುವಾಗ ತಾನು 2 ನೇ ಆರೋಪಿಯೊಂದಿಗೆ ಮನೆಬಿಟ್ಟು ಹೋಗಿರುವುದು ತಪ್ಪಾಗಿದೆ ಈಗ ನನ್ನ ತಂದೆ ತಾಯಿಯೊಂದಿಗೆ ಹೋಗುತ್ತೇನೆ ಎಂದು ಹೇಳಿಕೆ ನೀಡಿದ್ದಾಳೆ. ನಾನು ಕೂಡ ಪೋಲೀಸರಲ್ಲಿ ನನ್ನ ಮಗಳು ಮನೆಗೆ ಬರಲು ಒಪ್ಪಿದ್ದಾಳೆ ಅದರಂತೆ ನಾನು ಹಾಗೂ ನನ್ನ ಮಗಳು ನಮ್ಮ ಮನೆಗೆ ಹೋಗುತ್ತೇವೆ ಎಂದು ಹೇಳಿಕೆ ನೀಡಿದ್ದೇವೆ.

26. ಹಾಗೆ ನಮ್ಮ ಮನೆಗೆ ಹೋದ 20 ದಿನಗಳ ನಂತರ 2 ನೇ ಆರೋಪಿ ನನ್ನ ಮಗಳನ್ನು ಪುನಃ ಕರೆದುಕೊಂಡು ಹೋದ ಬಗ್ಗೆ ಪೋಲೀಸರಲ್ಲಿ ದೂರು ಸಲ್ಲಿಸಿದ್ದೇನೆ.

27. ನನ್ನ ಮಗಳು ಮರಣಹೊಂದಿದ ದಿನ ನಾನು ಊರಿನಲ್ಲಿರಲಿಲ್ಲ. ಅಂದು ನಾನು ಅರಸೀಕೆರೆಯ ಕೋಡಿಹಳ್ಳಿ ಯಲ್ಲಿದ್ದೆ. ನನ್ನ ಮಗಳು ಮರಣಹೊಂದಿದ ವಿಚಾರ ಬೆಳಿಗ್ಗೆ 8.00 ಗಂಟೆಗೆ ನನಗೆ ತಿಳಿಯಿತು. ನಾನು ಅರಸೀಕೆರೆಗೆ ಬಂದಾಗ ಬೆಳಿಗ್ಗೆ 9.00 ಗಂಟೆಯಾಗಿತ್ತು. ನಾನು ಅರಸೀಕೆರೆಯಿಂದ ಬಸ್ಸಿನಲ್ಲಿ ಸಖರಾಯಪಟ್ಟಣಕ್ಕೆ ಬಂದಾಗ ಬೆಳಿಗ್ಗೆ 10.30 ಆಗಿತ್ತು. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿ ಆನಂತರ ದೂರು ಸಲ್ಲಿಸಿದ್ದೇನೆ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿದಾಗ ಬೆಳಿಗ್ಗೆ 11.00 ಗಂಟೆಯಾಗಿತ್ತು.

28. ನಾನು ಸಖರಾಯಪಟ್ಟಣ ಠಾಣೆಯಲ್ಲಿ ಬೆಳಿಗ್ಗೆ 10.00 ಗಂಟೆಗೆ ದೂರು ಸಲ್ಲಿಸಿಲ್ಲ. ನನಗೆ ಮೃತದೇಹ ನೋಡುವವರೆಗೂ ಸ್ವತಃ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಪೋನ್ ಮೂಲಕ ಮಾಹಿತಿ ಪಡೆದಿದ್ದೇ ಎನ್ನುತ್ತಾರೆ. ನಾನು ಮನೆಯಲ್ಲಿ ದೂರು ಬರೆಸಿಕೊಂಡು ಸಖರಾಯಪಟ್ಟಣ ಠಾಣೆಗೆ ಹೋಗಿ ನೀಡಿದಾಗ ಮದ್ಯಾಹ್ನ 12.00 ಗಂಟೆ ಆಗಿರಬಹುದು. ದೂರನ್ನು ನನ್ನ ತಮ್ಮನ ಸ್ನೇಹಿತ ಸುರೇಶ ನಮ್ಮ ಮನೆಯಲ್ಲಿ ಬರೆದಿದ್ದಾನೆ. ದೂರು ಬರೆಯುವಾಗ ನಾನು ಹಾಗೂ

ಮೇಲೆ ಹೇಳಿದ ಸುರೇಶ ಇದ್ದೆವು. ದೂರು ಬರೆಯಲು ನಾನು ಮಾಹಿತಿ ನೀಡಿದ್ದೇನೆ. ದೂರು ಸಲ್ಲಿಸಲು ಕೂಡ ಮೇಲೆ ಹೇಳಿದ ಸುರೇಶ ನನ್ನೊಂದಿಗೆ ಬಂದಿದ್ದ. ಮೇಲೆ ಹೇಳಿದ ಸುರೇಶ ತೋಟದ ಕೆಲಸ ಮಾಡುತ್ತಾನೆ.

29.ಮೃತದೇಹ ನೋಡುಲು ಹೋದಾಗ ಬಹಳ ಜನ ಸೇರಿದ್ದರು. ನಾನು ಠಾಣೆಗೆ ಬೇಟಿ ನೀಡಿ ದೂರು ಬರೆಸಿರಲಿಲ್ಲ. ನನ್ನ ಹೇಳಿಕೆಯ ಮೇಲೆ ಪೋಲೀಸರು ದೂರು ಬರೆದಿರಲಿಲ್ಲ. ನಾನು ದೂರು ಸಲ್ಲಿಸುವವರೊಗೂ ಆರೋಪಿತರ ವಿರುದ್ಧ ಪ್ರಕರಣ ದಾಖಲಾಗಿರಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿತರು ಅಲ್ಲಿರಲಿಲ್ಲ.

30. ನನ್ನ ಮಗಳು 2 ನೇ ಆರೋಪಿಯೊಂದಿಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಎರಡನೇ ಮದುವೆ ಮಾಡಿಕೊಂಡಾಗ ನಾನು ಹಾಜರಿರಲಿಲ್ಲ. ದಿಃ 10.07.2023 ರಂದು ನಾನು ಪೋಲೀಸರಲ್ಲಿ ಮರು ಹೇಳಿಕೆ ನೀಡಿರುವುದಿಲ್ಲ. 1 ಮತ್ತು 2 ನೇ ಆರೋಪಿತರು ಗಂಡ ಹೆಂಡತಿಯರಾಗಿ ನಮ್ಮೂರಿನಲ್ಲಿ ವಾಸವಿದ್ದರು. ನನ್ನ ಮಗಳು ಮರಣಹೊಂದುವ ಮೊದಲು ನನ್ನ ತವರು ಮನೆಯಾದ ಚಿಕ್ಕಾಲಗಟ್ಟೆ ಗ್ರಾಮದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಳು. 2 ನೇ ಆರೋಪಿ ಹೊಸದಾಗಿ ಆರ್.ಸಿ.ಸಿ. ಮನೆ ಕಟ್ಟಿದ್ದಾನೆ. ಆ ಆರ್.ಸಿ.ಸಿ. ಮನೆಗೆ ತಾಗಿ ನಿರ್ಮಿಸಿದ ವಾಚಾಟಿ(ಮಾಡು)ನಲ್ಲಿ ಆರೋಪಿತರು ವಾಸವಿದ್ದರು. ವಾಚಾಟಿಗೆ ಅಂಟಿಕೊಂಡು ಅವರ ಶೌಚಾಲಯ ಇದೆ. ಆರೋಪಿತರ ಶೌಚಾಲಯ ಅವರ ಹೊಲದಲ್ಲಿಲ್ಲ. ನನ್ನ ಮಗಳು ಭಾರತಿಯ ಸಾವಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

31. ದಿಃ 06.07.2023 ರಂದು ನಮ್ಮೂರಿನಲ್ಲಿ ಅಂತರಘಟ್ಟಮ್ಮ ದೇವರ ಮಾಸಿಕ ಪೂಜೆ ಇತ್ತು. ಅಂತರಘಟ್ಟಮ್ಮ ದೇವರ ತಿಂಗಳ ಪೂಜೆಯಲ್ಲಿ ಕುರಿ ಕೋಳಿ ಬಲಿ ಕೊಡಲಾಗುತ್ತದೆ. ಅಂದು

ನಮ್ಮೂರಿನಲ್ಲಿ ಪ್ರತಿ ಮನೆಯವರು 2-3 ಕುರಿ ಕೋಳಿ ಬಲಿ ಕೊಟ್ಟು ಪೂಜೆ ಮಾಡುತ್ತಾರೆ. ದಿಃ 06.07.2023 ರಂದು ನಮ್ಮೂರಿನಲ್ಲಿ ಅಂತರಘಟ್ಟಮ್ಮ ದೇವಿ ಪೂಜೆ ಜೋರಾಗಿ ನಡೆಯುತ್ತದೆ. ಅಂದು ನೆಂಟರಿಷ್ಟರು ಬರುವುದು ಊಟ ಮಾಡಿ ಹೋಗುವುದು ನಡೆಯುತ್ತದೆ. ಅಂದು ನಮ್ಮೂರಿನಲ್ಲಿ ಸುಮಾರು 200 ಜನ ಸೇರಿದ್ದರು.

32. ದಿಃ 06.07.2023 ರಂದು ನಮ್ಮ ಸಂಪೂರ್ಣ ಕುಟುಂಬ ಮನೆಯಲ್ಲಿ ವಾಸವಿರಲಿಲ್ಲ. ಅಂದು ನಾನು ಮತ್ತು ನನ್ನ ಮಕ್ಕಳು ತಂಗಿಯ ಮನೆಗೆ ಹೋಗಿದ್ದೆವು, ನನ್ನ ಗಂಡ ಎಸ್ಟೇಟಿನಲ್ಲಿದ್ದರು. 2 ನೇ ಆರೋಪಿ ಮಂಜುನಾಥ ಹಾಗೂ ಚಾಸಾ.13 ರವರ ಮನೆ ಅಕ್ಕ ಪಕ್ಕದಲ್ಲಿದೆ. ಅಂದು ಚಾಸಾ.13 ರವರ ಮನೆಗೆ 1 ನೇ ಆರೋಪಿ ಹಾಗೂ ಅವಳ ಕುಟುಂಬದವರು ಹಬ್ಬಕ್ಕೆ ಬಂದಿದ್ದರು. ಅಂದು ಬೇರೆ ಬೇರೆ ಊರಿನಿಂದ ನೆಂಟರಿಷ್ಟರು ನಮ್ಮೂರಿಗೆ ಬಂದಿದ್ದರು.

33. ಅಂದು ಮಳೆ ಆಗಾಗ ಬರುತ್ತಿತ್ತು. ಅಂದು ಸಂಜೆ 7.00 ರಿಂದ ಬೆಳಿಗ್ಗೆ 7.00 ರವರೆಗೂ ವಿದ್ಯುತ್ ಸರಬರಾಜು ಇರಲಿಲ್ಲ ಎಂದರೆ ಸಾಕ್ಷಿಯು ವಿದ್ಯುತ್ ಆಗಾಗ ಬಂದು ಹೋಗುತ್ತಿತ್ತು ಎನ್ನುತ್ತಾರೆ. ಅಂದು ರಾತ್ರಿ ನಾನು ಊರಿನಲ್ಲಿರಲಿಲ್ಲ.

34. ನಾನು 2 ನೇ ಆರೋಪಿ ನನ್ನ ಮೃತ ಮಗಳೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಎಂದು ಪೋಲೀಸರಲ್ಲಿ ಹೇಳಿಕೆ ನೀಡಿಲ್ಲ. 2 ನೇ ಆರೋಪಿ ನನ್ನ ಮಗಳೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಎಂದು ನಾನು ನಿಪಿ.10 ದೂರಿನಲ್ಲಿ ಬರೆಸಿದ್ದೇನೆಯೇ ಇಲ್ಲವೆ ಎಂದು ನನಗೀಗ ನೆನಪಿಲ್ಲ.

35. ನಿಪಿ.1 ದೂರಿನಲ್ಲಿ ನಾನು ನನ್ನ ಮೃತ ಮಗಳು ನಿಗದಿತ ವ್ಯಕ್ತಿಯೊಂದಿಗೆ ಹೋಗಿದ್ದಾಳೆಂದು ಬರೆಸಿಲ್ಲ. 2 ನೇ ಆರೋಪಿ ನನ್ನ ಮೃತ ಮಗಳೊಂದಿಗೆ ಮದುವೆಯಾಗಿರುವುದನ್ನು ನೋಡಿರುವುದಿಲ್ಲ.

ನನ್ನ ಗಂಡನ ಅಣ್ಣ ನನ್ನ ಮಗಳು ಎರಡನೇ ಆರೋಪಿಯೊಂದಿಗೆ ಮದುವೆಯಾಗಿದ್ದಾಳೆಂದು ಹೇಳಿದ್ದರು. ಈ ವಿಚಾರವನ್ನು ನಾನು ಪೋಲೀಸರಲ್ಲಿ ಹೇಳಿಲ್ಲ.

36. 1 ನೇ ಆರೋಪಿ ನನ್ನ ಮಗಳಿಗೆ ತೊಂದರೆ ನೀಡುತ್ತಾಳೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೋಲೀಸರಲ್ಲಿ ದೂರು ನೀಡಿಲ್ಲ. 1 ನೇ ಆರೋಪಿ ನನ್ನ ಮಗಳಿಗೆ ತೊಂದರೆ ನೀಡುತ್ತಾಳೆ ಎಂದು ಊರಿನಲ್ಲಿ ಪಂಚಾಯತಿ ಸೇರಿಸಿರಲಿಲ್ಲ. ನನ್ನ ಮೃತ ಮಗಳು ಎರಡನೇ ಆರೋಪಿಯೊಂದಿಗೆ ಮದುವೆಯಾಗಿದ್ದಾಳೆ ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ.

37. ನನ್ನ ಮಗಳ ಮೃತದೇಹ ಆರೋಪಿತರಿಗೆ ಸೇರಿದ ಮನೆಯ ಹಿಂಬದಿಯ ಹೊಲದಲ್ಲಿ ಪತ್ತೆಯಾಗಿತ್ತು. ಮರುದಿನ ಬೆಳಿಗ್ಗೆ 7.00 ಗಂಟೆಯ ಸಮಯಕ್ಕೆ ನನ್ನ ಗಂಡನ ಅಣ್ಣ ನನ್ನ ಮಗಳ ಮೃತದೇಹ ನೋಡಿದ್ದಾನೆ. ರಾತ್ರಿ 8.00 ಗಂಟೆಯಿಂದ ಬೆಳಗಿನ 8.00 ಗಂಟೆಯ ಅವಧಿಯಲ್ಲಿ ನನ್ನ ಗಂಡನ ಅಣ್ಣ ಮೃತಳನ್ನು ನೋಡಿದ್ದಾರೆ. ನನ್ನ ಗಂಡನ ಅಣ್ಣ ಹಾಗೂ ತಮ್ಮ ಬೆಳಿಗ್ಗೆ 7.30 ರ ಸಮಯಕ್ಕೆ ನನಗೆ ಕರೆ ಮಾಡಿದ್ದರು. ನನ್ನ ಗಂಡನ ಅಣ್ಣ ಹಾಗೂ ತಮ್ಮನ ಹೇಳಿಕೆಯನ್ನು ಪೋಲೀಸರು ನನ್ನ ಮುಂದೆ ಪಡೆದುಕೊಂಡರು. ಮೃತ ಭಾರತಿ ಮರಣಹೊಂದುವುದನ್ನು ನಾನು ಸ್ವತಃ ನೋಡಿರುವುದಿಲ್ಲ.

38. ಬೇರೆ ಊರಿನಿಂದ ನಮ್ಮೂರಿಗೆ ಬಂದು ನಮ್ಮೂರಿನ ಜನರ ನೆಂಟರಿಷ್ಟರ ಪರಿಚಯ ನನಗೆ ಇಲ್ಲ. ಆರೋಪಿತರ ಮೇಲಿನ ದ್ವೇಷದಿಂದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ದಿಃ 21.12.2023 ರಂದು 2 ನೇ ಆರೋಪಿಯ ಮೇಲೆ ಹೊರಿಸಿದ ಆರೋಪಣೆಯನ್ನು ಗಟ್ಟಿಗೊಳಿಸಲು ನನ್ನ ಮುಖಾಂತರ

ಸುಳ್ಳು ದೂರು ಸ್ವೀಕರಿಸಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಎಸಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ